# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕನಗರ, ಕಂಟೋನ್ಮೆಂಟ್, ಬಳ್ಳಾರಿ – 583104

ಪ್ರೊ. ಶಶಿಕಾಂತ್ ಎಸ್. ಉಡಿಕೇರಿ
ಕುಲಸಚಿವರು(ಮೌಲ್ಯಮಾಪನ)

ದೂರವಾಣಿ: 08392-241011


ಸಂಖ್ಯೆ: ವಿಶ್ರೀಕೃವಿಬ/ಪರೀಕ್ಷಾ/ಸ್ನಾತಕೋತ್ತರ/ಮ.ಮೌ/2021-22/1001

ದಿನಾಂಕ: 18.11.2021

## ಅಧಿಸೂಚನೆ

**ವಿಷಯ:** ಸ್ನಾತಕೋತ್ತರ ಪದವಿಯ 4ನೇ ಸೆಮಿಸ್ಟರ್ ಮತ್ತು ಸ್ನಾತಕೋತ್ತರ ಡಿಪ್ಲೊಮಾದ 2ನೇ ಸೆಮಿಸ್ಟರ್ (ರೆಗ್ಯುಲರ್/ರಿಪೀಟರ್ಸ್) ವಿವಿಧ ವಿಭಾಗಗಳ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನಕ್ಕಾಗಿ ಅರ್ಜಿಯನ್ನು ಸಲ್ಲಿಸುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17.11.2021

*****

ವಿಶ್ವವಿದ್ಯಾಲಯದ 2020-21ನೇ ಶೈಕ್ಷಣಿಕ ಸಾಲಿನ ಸೆಪ್ಟೆಂಬರ್/ಅಕ್ಟೋಬರ್-2021ರ ತಿಂಗಳಿನಲ್ಲಿ ಜರುಗಿದ ಸ್ನಾತಕೋತ್ತರ ಪದವಿಯ ವಿವಿಧ ಕೋರ್ಸ್‌ಗಳ 4ನೇ ಸೆಮಿಸ್ಟರ್ (ರೆಗ್ಯುಲರ್/ರಿಪೀಟರ್ಸ್) ಹಾಗೂ ಸ್ನಾತಕೋತ್ತರ ಡಿಪ್ಲೊಮಾದ 2ನೇ ಸೆಮಿಸ್ಟರ್ (ರೆಗ್ಯುಲರ್/ರಿಪೀಟರ್ಸ್) ಪರೀಕ್ಷೆಗಳ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕಾಗಿ ಅರ್ಜಿಯನ್ನು ಸಲ್ಲಿಸುವ ವಿವರ ಈ ಕೆಳಗಿನಂತಿದೆ.

| ಕ್ರ ಸಂ | ವಿವರ | ಶುಲ್ಕ ವಿವರ | ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ |
|---|---|---|---|
| 01 | ಮರು ಮೌಲ್ಯಮಾಪನ | ಒಂದು ವಿಷಯಕ್ಕೆ ರೂ. 1,255/- | 19.11.2021 ರಿಂದ 27.11.2021 |

**ಸೂಚನೆಗಳು:**

1. ಮರು ಮೌಲ್ಯಮಾಪನಕ್ಕಾಗಿ ಅರ್ಜಿಯನ್ನು ಸಲ್ಲಿಸಲು ಬಯಸುವ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ಸಂಪರ್ಕಿಸಿ ಆನ್‌ಲೈನ್ ಮೂಲಕ ನಿಗಧಿತ ದಿನಾಂಕದೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. (ವೆಬ್‌ಸೈಟ್ ವಿಳಾಸ: www.vskub.ac.in & results.logisys.net.in/vskub)
2. ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಲು ಇಚ್ಛಿಸುವ ವಿಷಯವನ್ನು ಆಯ್ಕೆ ಮಾಡಿಕೊಳ್ಳತಕ್ಕದ್ದು.
3. ಶುಲ್ಕ ಪಾವತಿಸಿದ ನಂತರ ಬರುವ Unique Application Number ನ್ನು ವಿಶ್ವವಿದ್ಯಾಲಯದ ಜೊತೆ ಮಾಡುವ ಪತ್ರ ವ್ಯವಹಾರಗಳಲ್ಲಿ ನಮೂದಿಸಬೇಕು.
4. ವಿದ್ಯಾರ್ಥಿಗಳು ಅರ್ಜಿ, ಚಲನ್ ಮತ್ತು ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ಜಾತಿ/ಆದಾಯ ಪ್ರಮಾಣ ಪತ್ರದ ಪ್ರತಿಗಳನ್ನು ತಮ್ಮ ವಿಭಾಗದ ಮುಖ್ಯಸ್ಥರು/ಮಹಾವಿದ್ಯಾಲಯದ ಪ್ರಾಂಶುಪಾಲರಿಗೆ ಸಲ್ಲಿಸುವುದು.
5. ಮರು ಮೌಲ್ಯಮಾಪನದ ಫಲಿತಾಂಶವನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಯಾವುದೇ ಕಾರಣಕ್ಕೂ ವಿಸ್ತರಿಸಲಾಗುವುದಿಲ್ಲ.
6. ವಿದ್ಯಾರ್ಥಿಯು ತನ್ನ ನೋಂದಣಿ ಸಂಖ್ಯೆ ಮತ್ತು ವಿಷಯಗಳ ಆಯ್ಕೆಯನ್ನು ಸರಿಯಾಗಿ ನಮೂದಿಸದಿದ್ದಲ್ಲಿ ಅಥವಾ ಬೇರೆ ನೋದಣಿ ಸಂಖ್ಯೆ, ಸಂಬಂಧವಲ್ಲದ ವಿಷಯಗಳನ್ನು ನಮೂದಿಸಿದರೆ ಅದಕ್ಕೆ ವಿದ್ಯಾರ್ಥಿಯೇ ಹೊಣೆ. ಅಂತಹ ಪ್ರಕರಣಗಳನ್ನು ವಿಶ್ವವಿದ್ಯಾಲಯವು ಸರಿಪಡಿಸಲಾಗುವುದಿಲ್ಲ.

**ಕುಲಸಚಿವರು(ಮೌಲ್ಯಮಾಪನ)**
ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ

**ಪ್ರತಿಗಳು:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರಿಗೆ ಮಾಹಿತಿಗಾಗಿ.
2. ಕುಲಸಚಿವರು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರಿಗೆ ಮಾಹಿತಿಗಾಗಿ.
3. ಹಣಕಾಸು ಅಧಿಕಾರಿಗಳು, ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರಿಗೆ ಮಾಹಿತಿಗಾಗಿ.
4. ಎಲ್ಲಾ ವಿಭಾಗಗಳ ಮುಖ್ಯಸ್ಥರು/ಸಂಯೋಜಕರು, ಸ್ನಾತಕೋತ್ತರ ಪದವಿ ಇರುವ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ.
5. ಮೆ// ಲಾಜಿಸಿಸ್.ಬೆಂಗಳೂರು. ಶಾಖೆ: ವಿಶ್ರೀಕೃ ವಿಶ್ವವಿದ್ಯಾಲಯ, ಬಳ್ಳಾರಿ. ರವರಿಗೆ ಮಾಹಿತಿಗಾಗಿ.
6. ಕಛೇರಿ ಪ್ರತಿ.